# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 936
ಸದಸ್ಯರ ಹೆಸರು : ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 11.03.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಅವಧಿ ಮೀರಿರುವ ವಾಹನಗಳ ಸಂಖ್ಯೆ ಎಷ್ಟು; ಹಾಗೂ ಸಾರಿಗೆಗೆ ಯೋಗ್ಯವಲ್ಲದ ವಾಹನಗಳು ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ:GSR 29 (E), ದಿನಾಂಕ:16.01.2023ರನ್ವಯ ಹಾಗೂ ರಾಜ್ಯ ಸರ್ಕಾರದ ನಿರ್ದೇಶನದನುಸಾರ ಸಾರಿಗೆ ನಿಗಮಗಳ ಬಸ್ಸುಗಳನ್ನು ನಿರುಪಯುಕ್ತಗೊಳಿಸಲು 15 ವರ್ಷ ವಯೋಮಾನವನ್ನು ನಿಗದಿಪಡಿಸಲಾಗಿರುತ್ತದೆ.<br><br>ಅದರಂತೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಅವಧಿ ಮೀರಿರುವ ಬಸ್‌ಗಳು ಯಾವುದು ಕಾರ್ಯಾಚರಣೆಯಲ್ಲಿರುವುದಿಲ್ಲ.<br><br>ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ವಾಹನಗಳನ್ನು ನಿಷ್ಕ್ರಿಯಗೊಳಿಸಲು ಸುತ್ತೋಲೆ ಸಂಖ್ಯೆ:810/2023 ದಿನಾಂಕ:23.09.2023 ರಲ್ಲಿ ಸೂಚಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ. ಇದಲ್ಲದೆ, ಹೆಚ್ಚಿನ ಕಿ.ಮೀ. ಕ್ರಮಿಸಿರುವ ವಾಹನಗಳ, ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನಾಧರಿಸಿ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಅನುಮತಿಸಲಾಗುತ್ತಿರುತ್ತದೆ. ಮಿತಿಗಿಂತ ಹೆಚ್ಚಿನ ಕಿಮೀ ಕ್ರಮಿಸಿ, ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಬಸ್‌ಗಳಿಗೆ ಅವಶ್ಯವಿದ್ದಲ್ಲಿ ಕವಚ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡು ಬಸ್‌ಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ಪ್ರತಿ ವರ್ಷ ನಿಗಮದ ಬಸ್‌ಗಳನ್ನು ಅರ್ಹತಾ ಪತ್ರ ನವೀಕರಣಕ್ಕೆ ಒಳಪಡಿಸಲಾಗುತ್ತಿದೆ. ಪ್ರಸ್ತುತ ಎಲ್ಲಾ ಬಸ್ಸುಗಳು ಸುಸ್ಥಿಯಲ್ಲಿರುತ್ತವೆ. |
| ಆ. | ಅವಧಿ ಮೀರಿರುವ ವಾಹನಗಳನ್ನು ಬದಲಾಯಿಸಲು ಹಾಗೂ ಹೊಸ ಮಾರ್ಗಗಳಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡಲು ಬೇಕಾಗಿರುವ ಒಟ್ಟು ವಾಹನಗಳ ಸಂಖ್ಯೆ ಎಷ್ಟು; | ಸಂಸ್ಥೆಯಲ್ಲಿ ಅವಧಿ ಮೀರಿರುವ ವಾಹನಗಳು ಯಾವುದೂ ಇರುವುದಿಲ್ಲ.<br><br>2026-27ನೇ ಸಾಲಿಗೆ ಅವಧಿ ಮೀರಿರುವ ವಾಹಗಳನ್ನು ಬದಲಾಯಿಸಲು ಹಾಗೂ ಹೊಸ ಮಾರ್ಗಗಳಿಗೆ ಬಸ್ಸುಗಳನ್ನು ವ್ಯವಸ್ಥೆ ಮಾಡಲು ಕನಿಷ್ಟ 1500 ಹೊಸ ಬಸ್ಸುಗಳ ಅವಶ್ಯಕತೆಯಿದ್ದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 2023-24 ರಿಂದ 2025-26ರವರೆಗೆ ಖರೀದಿಸಿರುವ/ಖರೀದಿ ಹಂತದಲ್ಲಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:- |

| 2023-24 (Jan) | 2024-25 | 2025-26 | ಒಟ್ಟು |
|---|---|---|---|
| 510 | 698 | 10+60*+45** | 1323 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | * ಪ್ರಸಕ್ತ 2025-26ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 60 ನಾನ್ ಎ.ಸಿ.ಸ್ಲೀಪರ್ ಬಸ್‌ಗಳಿಗೆ ಕೇಂದ್ರ ಖರೀದಿ ಆದೇಶ ನೀಡಲಾಗಿದ್ದು, ಸದರಿ ಬಸ್‌ಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.<br><br>** ನಿಗಮಕ್ಕೆ 45 ಸಂಖ್ಯೆಯ ಕರ್ನಾಟಕ ಸಾರಿಗೆ ಮಾದರಿಯ ಬಸ್ಸುಗಳನ್ನು ಮಾರ್ಚ್-2026ರ ಅಂತ್ಯದೊಳಗೆ ಸೇರ್ಪಡೆಗೊಳಿಸಲಾಗುವುದು.<br><br>ಮುಂದುವರೆದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಮಾರ್ಚ್-2026ರ ನಂತರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 900 ಗ್ರಾಮಾಂತರ + 144 ಡಬಲ್ ಡೋರ್ (ನಗರ) ಸೇರ್ಪಡೆಗೊಳ್ಳಲಿವೆ.<br><br>ಕೇಂದ್ರ ಸರ್ಕಾರದ PM e-sewa ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 350 ವಿದ್ಯುತ್ ಚಾಲಿತ ಬಸ್ಸುಗಳನ್ನು GCC ಮಾದರಿಯಲ್ಲಿ ಆಚರಣೆ ಮಾಡಲು ಮಂಜೂರಾತಿ ದೊರೆತಿದ್ದು, ಮುಂದಿನ ದಿನಗಳಲ್ಲಿ ಸೇರ್ಪಡೆಗೊಳಿಸಲು ಯೋಜಿಸಲಾಗಿರುತ್ತದೆ. |
| ಇ. | ವೋಲ್ವೋ ವಾಹನಗಳ (ಬಸ್) ಸಂಚಾರಕ್ಕೆ ಯೋಗ್ಯವಾಗಿರಲು ಎಷ್ಟು ಕಿಲೋಮೀಟರ್ ಗಳನ್ನು ನಿಗಪಡಿಸಿದೆ ಹಾಗೂ ಅವಧಿ ಮೀರಿ ಸಂಚರಿಸುತ್ತಿರುವ ವೋಲ್ವೋ ವಾಹನಗಳ ಸಂಖ್ಯೆ ಎಷ್ಟು? | ರಾಜ್ಯದ ಸಾರಿಗೆ ನಿಗಮಗಳಲ್ಲಿ ವೋಲ್ವೋ ಬಸ್‌ಗಳನ್ನು ನಿಷ್ಕ್ರಿಯಗೊಳಿಸಲು ಸುತ್ತೋಲೆ ಸಂಖ್ಯೆ:810/2023 ದಿನಾಂಕ:23.09.2023 ರಲ್ಲಿ ಸೂಚಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತಿರುತ್ತದೆ. ಅಲ್ಲದೇ ಬಸ್‌ಗಳ ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನಾಧರಿಸಿ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಸಹ ಅನುಮತಿಸಲಾಗುತ್ತಿದೆ.<br><br>ಬಸ್‌ಗಳು ಸುಸ್ಥಿಯಲ್ಲಿದ್ದಲ್ಲಿ ಮಾತ್ರ ನಿಗದಿಪಡಿಸಿದ ಕಿ.ಮೀ ಕ್ರಮಿಸಿದ್ದರೂ ಸಹ 15 ವರ್ಷ ವಯೋಮಾನ ಪೂರೈಸುವವರೆಗೂ ಕಾರ್ಯಾಚರಣೆಗೆ ನಿಯೋಜಿಸುತ್ತಿದ್ದು, ಸದರಿ ಅವಧಿ ಮೀರಿ ಸಂಚರಿಸುತ್ತಿರುವ ವೋಲ್ವೋ ಬಸ್‌ಗಳು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಯಾವುದು ಇರುವುದಿಲ್ಲ. |

ಸಂಖ್ಯೆ: ಟಿಡಿ 29 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು